ಡಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ದಿಃ 04-09-2025**

<u>ಮುಂದುವರಿದ ಪಾಟೀ ಸವಾಲು</u> : ವಾದಿ ಪರಃ ಶ್ರೀ ಐ.ಆರ್.ಬಿ. ವಕೀಲರಿಂದಃ

ನನ್ನ ತಾಯಿ ಸೀತಾ ಪೂಜಾರ್ತಿ ಸುಮಾರು 2 ವರ್ಷಗಳ ಹಿಂದೆ ಮೃತಿಪಟ್ಟಿದ್ದು, ಆ ಸಮಯದಲ್ಲಿ ಅವರಿಗೆ 80 ವರ್ಷ ವಯಸ್ಸಾಗಿರುತ್ತದೆ. ನನ್ನ ತಾಯಿಗಿಂತ ನನ್ನ ತಂದೆ ಸುಮಾರು 5 ವರ್ಷ ದೊಡ್ಡವರು. ನನ್ನ ತಂದೆಗೆ ಈಗ 85 ವರ್ಷ ವಯಸ್ಸು. ನನ್ನ ತಂದೆಗೆ ಹೊರಗೆ ಹೋಗಲು ಕಷ್ಟವಾಗುತ್ತದೆ. 2020 ರ ಪೂರ್ವದಲ್ಲಿ ರಮೇಶ್ ಪೂಜಾರಿಯವರು ಮುಂಬೈಯಲ್ಲಿ ವಾಸ ಇದ್ದು ಈಗ

ದಾವಾ ಆಸ್ತಿಯಲ್ಲಿ ವಾಸವಿದ್ದಾರೆ. 2 ನೇ ವಾದಿ ಆಶಾಲತಾ ಮುಂಬೈಯಲ್ಲಿ ವಾಸವಿದ್ದು, ದಾವಾ ಆಸ್ತಿಗೆ ಆಗಾಗ್ಗೆ ಬಂದು ಹೋಗುತ್ತಾರೆ. 2 ನೇ ವಾದಿ ಆರ್ಥಿಕವಾಗಿ ಸ್ಥಿತವಂತರಾಗಿರುತ್ತಾರೆ ಎಂದರೆ ಇಲ್ಲ. ನನ್ನ ತಂದೆಗೆ 2 ನೇ ವಾದಿಯ ಮೇಲೆ ವಿಶೇಷ ಪ್ರೀತಿ ಇತ್ತು ಎಂದರೆ, ಎಲ್ಲಾ ಮಕ್ಕಳ ಮೇಲೆ ಸಮಾನ ಪ್ರೀತಿ ಇತ್ತು.

ನನ್ನ ತಂದೆ 2 ನೇ ವಾದಿಗೆ ದಾವಾ ಆಸ್ತಿಯ ಕುರಿತು ವ್ಯವಸ್ಥಾ ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯನ್ನು ದಾಖಲಿಸುವ ಪೂರ್ವದಲ್ಲಿ ನನಗೆ ಹಾಗೂ ನನ್ನ ಹೆಂಡತಿಗೆ ವಕೀಲರ ಮೂಲಕ ವಾದಿಗಳು ನೋಟೀಸು ನೀಡಿರುತ್ತಾರೆ ಎಂದರೆ ಸರಿ. ನಿಪಿ-10 ನೋಟೀಸು ಬಂದಿದ್ದು, ಅದನ್ನು ನನ್ನ ವಕೀಲರಿಗೆ ನೀಡಿರುತ್ತೀರಾ ಎಂದರೆ ಯಾರಿಗೂ ನೀಡಿರುವುದಿಲ್ಲ. ನ್ಯಾಯಾಲಯದಿಂದ ಬಂದ ಸಮನ್ಸ್ ನ್ನು ವಕೀಲರಿಗೆ ನೀಡಿರುತ್ತೇನೆ. ನಿಪಿ-10 ನೋಟೀಸನ್ನು ಓದಿರುತ್ತೇನೆ. ಸದ್ರಿ ನೋಟೀಸಿನಲ್ಲಿ ಶೀನಾ ಪೂಜಾರಿಯವರು ಆಶಾಲತಾರವರಿಗೆ ದಾವಾ ಆಸ್ತಿಯನ್ನು ವ್ಯವಸ್ಥಾ ಪತ್ರ ಮಾಡಿಕೊಟ್ಟಿರುವ ಬಗ್ಗೆ ಕಾಣಿಸಿರುತ್ತಾರೆ ಎಂದರೆ ಗೊತ್ತಿಲ್ಲ. ನಿಪಿ-10 ನೋಟೀಸನ್ನು ಓದಿದ ನಂತರ ವಕೀಲರ ಬಳಿ ಹೋಗಬೇಕು ಹಾಗೂ ಅದಕ್ಕೆ ಉತ್ತರ ನೀಡಬೇಕು ಎಂದು ನನಗೆ ಅನಿಸಿರುವುದಿಲ್ಲ. ನ್ಯಾಯಲಯದಿಂದ ಬಂದ ಸಮನ್ಸ್ ನ್ನು ವಕೀಲರಿಗೆ ನೀಡಿದ ನಂತರ ಯಾವ ಉದ್ದೇಶಕ್ಕಾಗಿ ದಾವೆಯನ್ನು ದಾಖಲಿಸಿರುತ್ತಾರೆ ಎಂದು ವಕೀಲರು ನನಗೆ ತಿಳಿಸಿರುತ್ತಾರೆ. ಆಶಾಲತಾರವರು ಮಾತ್ರ ದಾವೆ ದಾಖಲಿಸಿರುವ ಬಗ್ಗೆ ತಿಳಿದುಕೊಂಡಿರುತ್ತೇನೆ.

ಶೀನಾ ಪೂಜಾರಿಯವರ ತಂದೆಯ ಹೆಸರು ಲೋಕು ಪೂಜಾರಿ. 1999 ನೇ ಇಸವಿಯಲ್ಲಿ ನನಗೆ 14 ವರ್ಷ ಪ್ರಾಯವಿರಬಹುದು. 1999 ರಲ್ಲಿ ದಾವಾ ಆಸ್ತಿ ಹಾಗೂ ಇತರ ಆಸ್ತಿಗಳನ್ನು ನನ್ನ ತಂದೆ ನಾಗರಾಜ ಬಲಿಪ ಹಾಗೂ ಇತರರಿಂದ ಖರೀದಿಸಿರುತ್ತಾರೆ. ಅದರಲ್ಲಿ 5 ಸೆಂಟ್ಸು ಜಾಗವನ್ನು ಮನೆ ಕಟ್ಟಲು ಭೂಪರಿವರ್ತನೆ ಮಾಡಿರುತ್ತಾರೆ ಎಂದರೆ ಸರಿ. ಸದ್ರಿ ಜಾಗದ ಒಟ್ಟು ವಿಸ್ತೀರ್ಣ 4 ಎಕರೆ 30 ಸೆಂಟ್ಸು

ಇದ್ದು, ಅದರ ಸರ್ವೆ ನಂಬರ್ 392/1 ಆಗಿರುತ್ತದೆ. ದಾವಾ ಆಸ್ತಿಯನ್ನು ಖರೀದಿಸಿದ ನಂತರ ಪಹಣಿ ಪತ್ರಿಕೆಗಳು ಶೀನಾ ಪೂಜಾರಿಯವರ ಹೆಸರಿಗೆ ಬದಲಾವಣೆ ಆಗಿರುತ್ತದೆ. ಈಗ ಸಾಕ್ಷಿಗೆ ನಿಪಿ-8 ದಾಖಲೆಯನ್ನು ತೋರಿಸಿ ದಾವಾ ಆಸ್ತಿಯಲ್ಲಿರುವ ಮನೆ ಶೀನಾಪೂಜಾರಿಯವರ ಹೆಸರಿನಲ್ಲಿ ಇರುತ್ತದೆ ಎಂದರೆ ನನಗೆ ಗೊತ್ತಾಗುವುದಿಲ್ಲ ಎಂದು ನುಡಿಯತ್ತಾರೆ. ದಾವಾ ಆಸ್ತಿಯಲ್ಲಿರುವ ಮನೆ ಶೀನಾಪೂಜಾರಿಯವರ ಹೆಸರಿನಲ್ಲಿರುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಮನೆಯನ್ನು 2011 ರಿಂದ 2013 ರವರೆಗೆ ಕಟ್ಟಲಾಗಿರುತ್ತದೆ. ಮನೆ ನಿರ್ಮಿಸಲು ಸುಮಾರು ರೂ 9,85,000/- ಖರ್ಚಾಗಿರುತ್ತದೆ.

ಸೋಜಾ ಕ್ಯಾಟರಿಂಗ್ ನವರು ನನಗೆ ಎಷ್ಟು ಸಂಬಳ ನೀಡುತ್ತಿದ್ದರು ಎಂದು ತೋರಿಸಲು ಅವರನ್ನು ಸಾಕ್ಷಿ ಮಾಡುತ್ತೇನೆ. ನಾನು ಸಂಬಳದ ರಿಜಿಸ್ಟರ್ ಗೆ ಸಹಿ ಹಾಕಿರುವುದಿಲ್ಲ. ನಾನು ಕಾರ್ಯಕ್ರಮಗಳು ಇದ್ದಾಗ ಮಾತ್ರ ಸೋಜಾ ಕ್ಯಾಟರಿಂಗ್ ನಲ್ಲಿ ಕೆಲಸಕ್ಕೆ ಹೋಗುತ್ತಿದ್ದೆ ಎಂದರೆ ಸರಿಯಲ್ಲ. 2011 ರಿಂದ 2013 ರವರೆಗೆ ನನಗೆ ಹೇಳುವಂತಹ ಉತ್ಪತ್ತಿ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಬಳಿ ಹಣ ಇದ್ದ ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ಮನೆ ನಿರ್ಮಾಣಕ್ಕೆ ನಾನು ಯಾವುದೇ ಹಣ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

ಮುದುವರಿದ ಪಾಟೀ ಸವಾಲಿಗೆ ಸಮಯಾವಕಾಶಕೋರಿದ್ದು, ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ